

ಇಬ್ಬರು ಮಕ್ಕಳು. ಒಬ್ಬ ಹುಡುಗ, ಇನ್ನೊಬ್ಬಳು ಹುಡುಗಿ; 10–12 ವರ್ಷ ಇರಬಹುದು. ಇವರ ನಡುವೆ ಇತ್ತೀಚೆಗೆ ನಡೆದ ಒಂದು ಸಂವಾದ. ನಾವಿದ್ದ ಸಮಾರಂಭಕ್ಕೆ, ದೂರದಲ್ಲಿ ಬರುತ್ತಿದ್ದ ಹೊಸದಾಗಿ ಮದುವೆಯಾದ ಗಂಡುಹೆಣ್ಣನ್ನು ತೋರಿಸುತ್ತಾ ಆ ಪುಟ್ಟ ಹುಡುಗಿ ತಕರಾರಿನ ದನಿಯಲ್ಲಿ ಹೇಳುತ್ತಿದ್ದರು: 'ನೋಡು, ನೋಡು! ಹೆಂಡತಿ ಮುಂದೆ ಹೋಗುತ್ತಿದ್ದಾಳೆ, ಗಂಡ ಹಿಂದೆ ಹೋಗುತ್ತಿದ್ದಾನೆ!' ಪುಟ್ಟ ಹುಡುಗ, 'ಏನಾಗಿಹೋಯಿತು!' ಎಂಬಂತೆ ಹಣೆ ಬಡಿದುಕೊಂಡ.

ಕೆಲವೇ ವರ್ಷಗಳ ಹಿಂದೆ ನಡೆದ ಒಂದು ಘಟನೆ. ಕನ್ನಡ ಸಿನಿಮಾರಂಗದ ಜನಪ್ರಿಯ ನಾಯಕನಟನ ಹೆಂಡತಿ ಆತ ಕೊಡುತ್ತಿದ್ದ ಹಿಂಸೆ ತಾಳಲಾರದೆ ಜೀವಭಯದಲ್ಲಿ ನಡುರಾತ್ರಿ ಎರಡು ಗಂಟೆ ಸುಮಾರಿಗೆ ಸಮೀಪದ ಪೊಲೀಸ್ ಠಾಣೆಗೆ ಹೋದಳು. ಆದರೆ ತಕ್ಷಣ ದೂರು ದಾಖಲಿಸಿಕೊಳ್ಳದ ಪೊಲೀಸರು ಆಕೆಯ ಸಂಬಂಧಿಕರು, ಸಿನಿಮಾವಲಯದ ಹಿರಿಯರನ್ನು ಕರೆಸಿ ಮಾತನಾಡಿಸಿದರು. ಈ ಮಾತುಕತೆಗಳಲ್ಲಿ ಭಾಗವಹಿಸಿದ ಎಲ್ಲರೂ ಆ ನಟನಿಗೆ ಹೇಳಿದಷ್ಟೇ 'ಬುದ್ಧಿವಾದ'ವನ್ನು ಆತನ ಹೆಂಡತಿಗೂ ಹೇಳಿರುತ್ತಾರೆ. ಇದು ಸರ್ವೇಸಮಾನ್ಯ. ಪರಿಣಾಮವಾಗಿ, ಬಲ್ಲ ಮೂಲಗಳ ಪ್ರಕಾರ ಈಗಲೂ ಆ ತಾರಾನಟ ಹೆಂಡತಿಗೆ ಹಿಂಸೆ ನೀಡುತ್ತಲೇ ಇದ್ದಾನೆ. ಹೆಂಡತಿ 'ಅನುಸರಿಸಿಕೊಂಡು' ಹೋಗುತ್ತಿದ್ದಾಳೆ!

ಹೆಂಡತಿಗೆ ಹೇಳುವ ಬುದ್ಧಿಮಾತು ಎಲ್ಲಾ ಕಡೆಗಳಲ್ಲಿಯೂ ಹೆಚ್ಚೂ ಕಮ್ಮಿ ಒಂದೇ ರೀತಿ ಇರುತ್ತದೆ. ನಮ್ಮ ಮನೆಮಗಳು 'ಗಂಡ ಹೊಡೆಯುತ್ತಾನೆ' ಎಂಬ ವಿಷಯವನ್ನು ನಮ್ಮೊಂದಿಗೆ ತೋಡಿಕೊಂಡರೂ ನಮ್ಮ ಸಲಹೆ, ಬುದ್ಧಿಮಾತೂ ಅದೇ ಆಗಿರುತ್ತದೆ. 'ಅನುಸರಿಸಿಕೊಂಡು ಹೋಗು', 'ಅವನನ್ನು ಬಿಟ್ಟರೆ ನಿನ್ನ ಜೀವನ ಹೇಗೆ ನಡೆಯುತ್ತದೆ?', 'ಮಕ್ಕಳ ಮುಖ ನೋಡು', 'ಜನ ಏನು ಹೇಳುತ್ತಾರೆ ಯೋಚಿಸು', ಹೀಗೆ...

ಇನ್ನೂ ಮುಂದುವರೆದು, 'ಅವನಿಗೆ ಸಿಟ್ಟು ತರಿಸುವಂಥದ್ದನ್ನೂ ನೀನು ಏನನ್ನೂ ಮಾಡಬೇಡ' ಎಂದು ಅವಳನ್ನೇ ದೂಷಿಸುವ ಮಾತನ್ನೋ, 'ಏನೋ ಸಿಟ್ಟು ಬಂದಾಗ ಮಾತ್ರ ಎರಡು ಏಟು ಹೊಡೆಯುತ್ತಾನೆ; ಅದನ್ನು ಬಿಟ್ಟರೆ ಅವನು ಒಳ್ಳೆಯವನು', ಎಂದು ಹಿಂಸೆಯನ್ನು ಸಹಜವೆಂಬಂತೆ ಕಾಣುವ ಮಾತನ್ನೋ, 'ಅವನಿಗೆ ನೀನೆಂದರೆ ತುಂಬಾ ಪ್ರೀತಿ, ಏನೋ ಮನಃಸ್ಥಿತಿ ಸರಿಯಿಲ್ಲದಿದ್ದಾಗ ಹೀಗಾಗುತ್ತೆ' ಎಂಬ ಸಮಜಾಯಿಷಿ ಮಾತನ್ನೋ ಹೇಳಿಬಿಡುತ್ತೇವೆ.



ಒಂದೇ ಒಂದು ಬಾರಿಯೂ, ಮನೆಮಗಳಿಗೆ ಹೀಗಾಯಿತಲ್ಲಾ ಎಂಬ ಸಂಕಟದಿಂದಲೂ, 'ಛೇ! ಎಂಥಾ ನೀಚ ಅವನು! ಬಿಟ್ಟು ಬಾ, ನಾವಿದ್ದೇವೆ ನಿನ್ನ ಜೊತೆ' ಎನ್ನುವ ಮಾತು ನಮ್ಮ ಬಾಯಲ್ಲಿ ಬರುವುದಿಲ್ಲ. ಹೆಣ್ಣುಮಗಳ ಸ್ವಾಸ್ಥ್ಯ, ಅವಳ ಆತ್ಮಗೌರವಕ್ಕಿಂತಲೂ ನಮಗೆ 'ಸಂಸಾರ ಒಂದಾಗಿದೆ' ಅನ್ನುವ ತೋರಿಕೆ ಹೆಚ್ಚು ಮುಖ್ಯ. ಹಿಂಸೆಯಿರುವ ಆ ಸಂಸಾರ ಒಂದಾಗಿರುವುದು ಹೊರಜಗತ್ತಿನೆದುರಿನ ತೋರಿಕೆಯಷ್ಟೇ ಆಗಿರುತ್ತದೆ. ಅಲ್ಲಿ, ಹುಸಿ ಸಂಸ್ಕೃತಿಯ ಭೂತ ಹೊಕ್ಕಾಗ ನಾವು 'ಗೃಹ ಲಕ್ಷ್ಮಿ' ಎಂದು ಕರೆಯುವ ನಮ್ಮ ಹೆಣ್ಣುಮಗಳು ಹಿಂಸೆಯ ಜೀವನ ನಡೆಸುತ್ತಿರುತ್ತಾಳೆ ಎಂಬುದೂ ನಮಗೆ ಕಾಣದೇಹೋಗುತ್ತದೆ. ಬದಲಿಗೆ ಬೇಕಾದರೆ, 'ನೀನು ಮನಸ್ಸುಮಾಡಿದರೆ ಅವನ ಮನಸ್ಸನ್ನು ಪರಿವರ್ತಿಸಬಹುದು. ನೀನೇ ಹಟಮಾಡುತ್ತಿದ್ದಿ, ಸೋತು ಗೆಲ್ಲುವುದನ್ನು ಕಲಿತುಕೋ' ಎಂದು ಇನ್ನಷ್ಟು ಭಾರದ ಜವಾಬ್ದಾರಿ ಹೊರಿಸಿ ಆಕೆಯ ಬಾಯ್ಮುಚ್ಚಿಸುತ್ತೇವೆ.

ಹೀಗೆ ತನ್ನ ಮೇಲೆ ಆಗುವ ಕ್ರೌರ್ಯವನ್ನು ಮಹಿಳೆ ಇದು ಸಾಮಾನ್ಯ, ಸಹಜ ಪ್ರಕ್ರಿಯೆ ಎಂದು ಒಪ್ಪಿಕೊಳ್ಳುವಲ್ಲಿ ನಾವೆಲ್ಲರೂ ಭಾಗಿಗಳಾಗುತ್ತೇವೆ. ಈ 'ಸುಂದರ ಸಂಸಾರ'ದ ನಮ್ಮ ಪರಿಕಲ್ಪನೆಯಲ್ಲಿ ಹೆಣ್ಣಿಗೆ, ಆಕೆಯ ಗೌರವ, ಸ್ವಾಸ್ಥ್ಯ, ಕೊಡುಗೆ, ಪಾತ್ರ – ಎಲ್ಲವಕ್ಕೂ ಯಾವುದೇ ಸ್ಥಾನವೂ ಇರುವುದಿಲ್ಲ. ಇದು ಎಂಥಾ ದೊಡ್ಡ ಅಸಮಾನತೆ, ಅನ್ಯಾಯ, ಕ್ರೌರ್ಯ ಎನ್ನುವುದು ನಮ್ಮ ಗ್ರಹಿಕೆಗೂ ಬಾರದಷ್ಟು ಈ ವಿಷಯ ನಮ್ಮ ಪ್ರಜ್ಞೆಯಲ್ಲಿ ಒಂದಾಗಿಹೋಗಿದೆ.

## ಸುಖ ಸಂಸಾರವೆಂಬ ಮುಳ್ಳಿನ ಕಿರೀಟ

ನಾವು ನಮ್ಮ ಕುಟುಂಬಗಳಲ್ಲಿ, ಸಮಾಜವಾಗಿ, ಹಿರಿಯರಾಗಿ, ಕಾನೂನು ವ್ಯವಸ್ಥೆಯ ಭಾಗಗಳಾಗಿದ್ದಾಗಲೂ ನಮ್ಮ ಈ ನಂಬಿಕೆಗಳನ್ನು ನಮ್ಮ ಹೆಣ್ಣುಮಕ್ಕಳ ಮೇಲೆ ಹೇರುತ್ತಾ ಬಂದಿದ್ದೇವೆ. ಎಲ್ಲಾ ಸವಾಲು, ಒತ್ತಡ, ಹಿಂಸೆ

